ಪ್ರತಿಬಿಂಬ

**PRATIBIMBA –Multidisciplinary Kannada Research Journal of IIMRD**
**ISSN: 2582-2284**
**Vol-5 Issue 1, July-August, 2023, Pp. 50-58**
**©*IIMRD*, Mysuru**

IIMRD JOURNALS

**www.iimrd.com**

# ನಿಜಾಮ್ ಕರ್ನಾಟಕದಲ್ಲಿ ದಲಿತ ಚಳವಳಿ: ಪರಿಕಲ್ಪನೆ ಮತ್ತು ಸಿದ್ಧಾಂತ

**ಮಹದೇವ**[*] & **ಡಾ. ವೈ. ಹೆಚ್. ನಾಯಕವಾಡಿ**[**]
*ಸಂಶೋಧನಾ ವಿದ್ಯಾರ್ಥಿ & **ಪ್ರಾಧ್ಯಾಪಕರು
ಇತಿಹಾಸ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ವಿಶ್ವವಿದ್ಯಾನಿಲಯ, ಮಾನಸಗಂಗೋತ್ರಿ,

**ಸಾರಾಂಶ: (Abstract)**

*ಭಾರತದ ಸಾಮಾಜಿಕ ಅಸಮಾನತೆಯನ್ನು ಹೋಗಲಾಡಿಸುವಲ್ಲಿ ಅನೇಕ ಸಮಾಜ ಸುಧರಕರು ಶ್ರಮಿಸಿಹೋಗಿದ್ದಾರೆ. ಅದರಂತೆ ದಲಿತಪರ ಚಳವಳಿಗಳು ಪ್ರಾದೇಶಿಕ ನೆಲೆಯಲ್ಲಿ ಹುಟ್ಟಿ ಗುರುತರವಾದ ಜವಾಬ್ದಾರಿಯನ್ನು ಪೂರೈಸಿದ್ದಲ್ಲದೆ. ಅನುಕರಣೆಯವಾಗಿ ಉಳಿದುಕೊಂಡಿವೆ. ಅಂತಹ ಪ್ರಾದೇಶಿ ದಲಿತ ಚಳವಳಿಗೆ ಹಿಂಬುಕೊಟ್ಟ ನೆಲ ನಿಜಾಮ್ ಕರ್ನಾಟಕ. ಹೀಗಾಗಿ ಅದು ನಿಜಾಮ್ ಸಂಸ್ಥಾನ ಮತ್ತು ಕರ್ನಾಟಕದಲ್ಲಿಯೇ ವಿಶಿಷ್ಟ ಪ್ರದೇಶವೇನಿಸಿದೆ. ಮುಂದುವರೆದು ಈ ನಾಡಿನ ನೆಲದಲ್ಲಿಯೇ ಸಮಾಜೋಧಾರ್ಮಿಕ ನೆಲೆಯಲ್ಲಿ ಕ್ರಾಂತಿಯನ್ನು ಮಾಡಿದ ಶರಣ ಬಸವ ಮತ್ತು ಬಸವಾದಿ ಶರಣರ ವಚನ ಚಳವಳಿ ದೇಶದಲ್ಲಿಯೇ ಮಾದರಿಯಾಗಿ ಉಳಿದಿರುವಂತದ್ದು. ಸನಾತನ ಕುತಂತ್ರಕ್ಕೆ ಬಲಿಯಾಗಿ ಊರಾಚೆ ಕೊಳಚೆ ಪ್ರದೇಶದಲ್ಲಿ ವಾಸಿಸುತ್ತದ್ದ ಅಸ್ಪೃಶ್ಯರನ್ನು ಶರಣತತ್ವದೆಡೆಗೆ ಬಸವ ನೇತೃತ್ವದ ಕ್ರಾಂತಿ ಅದೊಂದು ಮಾನವ ಕುಲಕ್ಕೆ ಮಹತ್ತರ ಕೋಡುಗೆ ನಿಡಿದ ನೆಲವು ನಿಜಾಮ್ ಕರ್ನಾಟಕವಾಗಿದೆ. ವಚನ ಚಳವಳಿಯ ನಂತರ ಇದೇ ನೆಲದಲ್ಲಿ ಮಹತ್ತರ ಸಮಾಮುಖಿ ಚಿಂತನೆ ನಡೆಸಿದವರು ದಾಸರು ಮತ್ತು ತತ್ವಪಾದಕರು ಕುಲಗೋತ್ರಗಳ ಮೇಲುಕೀಳನ್ನು ಟೀಕಿಸಿದರು ಹಾಗೂ ಸಮಾಜದ ಓರೆಕೊರೆಗಳನ್ನು ತಿದ್ದಿದರು ಎನ್ನುವುದು ಸಾಹಿತ್ಯದಲ್ಲಿ ದಾಖಲಾಗಿದೆ.*

**ಮುಖ್ಯಪದಗಳು (Keywords):** ನಿಜಾಮ್ ಕರ್ನಾಟಕ, ದಲಿತ ಚಳವಳಿ, ಸೈದ್ಧಾಂತಿಕ ಚಿಂತನೆಗಳು, ದಲಿತ ಜಾಗೃತಿ.

## ಪೀಠಿಕೆ

ಆಧುನಿಕ ಕಾಲದ ಮಹನೀಯರಾದ ಜ್ಯೋತಿಬಾ ಫುಲೆ, ಶಾಹು ಮಹರಾಜ್ ಅಂಬೇಡ್ಕರ್, ಮಹತ್ಮ ಗಾಂಧೀಜಿ, ಬಾಗೆರೆಡ್ಡಿ ವರ್ಮ, ಕುಸುಮ್ ಧರ್ಮನ್, ಶಿವಯೋಗಿ ಸ್ವಾಮಿ ಹಾಗೂ ದೇಶ ವಿದೇಶಗಳಲ್ಲಿ ಅನೇಕ ಕ್ರಾಂತಿಕಾರಿ ಘಟನೆಗಳಿಗೆ ಅಥವಾ ಮಾನವಜೀವಪರ ಹೋರಾಟಗಳಿಗೆ ಒಗ್ಗಿಕೊಂಡ ನಿಜಾಮ್ ಕರ್ನಾಟಕ ಆಧುನಿಕ ಕಾಲದಲ್ಲಿಯೂ ದಲಿತಪರ ಚಳವಳಿಯಿಂದ ತನ್ನದೇ ಆದ ವೈಶಿಷ್ಟ್ಯವನ್ನು ಮೇರೆದಿದೆ. ಹೈದ್ರಬಾದ್ ಕರ್ನಾಟಕ ಅಥವಾ ನಿಜಾಮ್ ಕರ್ನಾಟಕವೇನಿಸಿಕೊಳ್ಳುವ ಈ ನನ್ನ ಸಂಶೋಧನ ಪ್ರದೇಶವು ಹೈದ್ರಬಾದ ನಿಜಾಮ್ ಸಂಸ್ಥಾನದ ಆಡಳಿತಕ್ಕೊಳಪಟ್ಟು (ಆಂಧ್ರ, ಕರ್ನಾಟಕ, ಮಹಾರಾಷ್ಟ್ರದ ಕೆಲ

*Please cite this article as: ಮಹದೇವ & ವೈ. ಹೆಚ್. ನಾಯಕವಾಡಿ.* (2023). ನಿಜಾಮ್ ಕರ್ನಾಟಕದಲ್ಲಿ ದಲಿತ ಚಳವಳಿ: ಪರಿಕಲ್ಪನೆ ಮತ್ತು ಸಿದ್ಧಾಂತ. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 5(1). ಪು.ಸಂ.* 50–58

ಪ್ರದೇಶಗಳು) ದೇಶಕ್ಕೆ ಸ್ವಾತಂತ್ರ್ಯ ಬಂದರೂ ಈ ಪ್ರದೇಶ ಸ್ವತಂತ್ರವಾಗಿರಲಿಲ್ಲವೆನ್ನುವದರಿಂದಲೂ ವಿಶಿಷ್ಟ ಪ್ರದೇಶವೆನಿಸಿದೆ.

ಕರ್ನಾಟಕದಲ್ಲಿ ನಿಜಾಮರು 19ನೇ ಶತಮಾನ ಮತ್ತು 20ನೇ ಶತಮಾನದಲ್ಲಿ ಆಳ್ವಿಕೆ ಮಾಡುತ್ತಿದ್ದರು. ಆ ನಿಜಾಮರು ಅಂದರೆ ಮೀರ್ ಮೆಹಬೂಬ್ ಅಲಿ ಮತ್ತು ಮೀರ್ ಉಸ್ಮಾನ್ ಅಲಿಖಾನ್ ಆಳ್ವಿಕೆ ಮಾಡುತ್ತಿದ್ದರು. ಆಗಿನ ನಿಜಾಮ್ ಕರ್ನಾಟಕ ಎಂದರೆ ಗುಲ್ಬರ್ಗ, ರಾಯಚೂರು, ಬೀದರ್ ಈ ಮೂರು ಜಿಲ್ಲೆಗಳು ಸಾಮಾನ್ಯವಾಗಿ ಹೈದರಾಬಾದ್ ಕರ್ನಾಟಕ ಎನ್ನುತ್ತೇವೆ ಮತ್ತು ಕಲ್ಯಾಣ ಕರ್ನಾಟಕ ಎಂದೂ ಕರೆಯುತ್ತೇವೆ. ವಿಶೇಷವಾಗಿ ನಿಜಾಮ್ ಕರ್ನಾಟಕ ಅಂತಲೂ ಕರೆಯುತ್ತೇವೆ. ವಾಸ್ತಾವಿಕವಾಗಿ ಹೇಳುವುದಾದರೆ ನಿಜಾಮ್ ಆಡಳಿತಕ್ಕೆ ಸಂಬಂಧಿಸಿದಂತೆ ಐತಿಹಾಸಿಕ ಮೂಲಗಳು ಹೆಚ್ಚು ಹೈದರಾಬಾದ್ ಕರ್ನಾಟಕದ ಚರಿತ್ರೆಯನ್ನು ತಿಳಿಯಲು ಸಹಾಯ ಮಾಡುತ್ತವೆ. ಅಲ್ಲಿ ದೊರೆಯುವ ದಾಖಲೆಗಳು ಅಲ್ಲಿನ ಐತಿಹಾಸಿಕ ಅಂಶಗಳ ಕುರಿತಾದ ಪೂರಕವಾದ ಮಾಹಿತಿ ನಿಡುತ್ತವೆ. ನಿಜಾಮ್ ಕರ್ನಾಟಕವು ನಿಜಾಮರ ಒಂದು ಆಡಳಿತಾತ್ಮಕ ಘಟಕವು ಸಹ ಆಗಿತ್ತು. ಈ ಮೇಲಿನ ಅಂಶಗಳನ್ನು ಗಮನದಲ್ಲಿರಿಸಿಕೊಂಡು ಹೈದರಾಬಾದ್ ನಿಜಾಮ್ ಸಂಸ್ಥಾನಕ್ಕೆ ಒಳಪಡುವ ನನ್ನ ಪ್ರಸ್ತುತ ಅಧ್ಯಯನ ಪ್ರದೇಶವಾದ ನಿಜಾಮ್ ಕರ್ನಾಟಕದಲ್ಲಿ ಅವರ ಆಳ್ವಿಕೆ ಮತ್ತು ಅವರ ಐತಿಹಾಸಿಕ ಕೊಡುಗೆಗಳ ಕುರಿತು ಸಾಹಿತ್ಯ ಸಮೀಕ್ಷೆ ಆರಂಭಿಸಿದಾಗ ನಿಜಾಮ್ ಕರ್ನಾಟಕ ಪ್ರದೇಶ ಐತಿಹಾಸಿಕವಾಗಿ ಸಾಂಸ್ಕೃತಿಕ, ರಾಜಕೀಯ ಹಾಗೂ ಸಾಹಿತ್ಯಿಕವಾಗಿ ತನ್ನದೇ ಆದ ವೈಶಿಷ್ಟ್ಯವನ್ನು ಹೊಂದಿದೆ. ಪ್ರಾಚೀನ ಕಾಲದಿಂದಲೂ ಬೌದ್ಧರು, ಜೈನರು, ಶರಣರ, ದಾಸರ ಹಾಗೂ ಸೂಫಿಗಳ ಸಮನ್ವಯ ನೆಲೆಬಿಡಾಗಿದೆ. ಕರ್ನಾಟಕದ ಚರಿತ್ರೆಯಲ್ಲಿ ನಿಜಾಮ್ ಕರ್ನಾಟಕ ಪ್ರದೇಶವು ಅತ್ಯಂತ ಮಹತ್ವದ ಸ್ಥಾನ ಪಡೆದುಕೊಂಡಿದೆ.[1]

ಮೌರ್ಯರು, ಶಾತವಾಹನರು, ಬಾದಾಮಿಚಾಲುಕ್ಯರು, ರಾಷ್ಟ್ರಕೂಟರು, ಕಲ್ಯಾಣ ಚಾಲುಕ್ಯರು, ಅರಲೂರಿನ ಹೈಹವರು, ನಿಜಾಮರು, ಹೈದರಾಬಾದ್ ನಿಜಾಮರ ಸಾಮಂತರು ಅಥವಾ ಸಣ್ಣ ಪುಟ್ಟ ಮನೆತನಗಳಲ್ಲಿ ಒಂದಾದ ಕಾಕಲವಾರ ದೊರೆಗಳ ಮನೆತನವು ಆಳ್ವಿಕೆ ಮಾಡಿ ಸಾಂಸ್ಕೃತಿಕ ಲೋಕಕ್ಕೆ ತಮ್ಮದೇ ಆದ ಕೊಡುಗೆಯನ್ನು ನೀಡಿದ್ದಾರೆ. ಕನ್ನಡ ಸಾಹಿತ್ಯದ ಪ್ರಥಮ ಲಾಕ್ಷಣಿಕ ಕೃತಿಯಾದ ಕವಿರಾಜಮಾರ್ಗ ರಚನೆಯಾಗಿರುವುದು ಇದೆ ನೆಲದಲ್ಲಿ. ಅಗಸ್ಟ್15, 1947ರಂದು ಭಾರತಕ್ಕೆ ಸ್ವಾತಂತ್ರ್ಯ ದೊರೆತರು ನಿಜಾಮ್ ಹೈದರಾಬಾದ್ ಕರ್ನಾಟಕ ಪ್ರದೇಶಕ್ಕೆ ಸ್ವಾತಂತ್ರ್ಯ ದೊರೆಯುವಲ್ಲಿಯು ವಿಶೇಷತೆ ಹೊಂದಿದೆ ಈ ಪ್ರದೇಶಗಳಲ್ಲಿ ರಾಷ್ಟ್ರಧ್ವಜ ಹಾರಿಸುವಂತಿಲ್ಲ, ವಂದೇ ಮಾತರಂ ಹೇಳುವಂತಿರಲಿಲ್ಲ. ನಂತರ 1948ರ ಸೆಪ್ಟೆಂಬರ್ 17ರಂದು ನಿಜಾಮ್ ಕರ್ನಾಟಕ ಪ್ರದೇಶಕ್ಕೆ ವಿಮೋಚನೆ ದೊರೆಯಿತು. ಇಂತಹ ರೋಮಾಂಚನಕಾರಿಯಾಗಿರುವ ಪ್ರಾಚೀನ ಕಾಲದಿಂದ ನಿಜಾಮ್‌ನ ವಿಮೋಚನೆವರಿಗೆ ಚಾರಿತ್ರಿಕ ಅಂಶಗಳನ್ನು ಒಳಗೊಂಡ ಹಾಗೂ ವಿಶೇಷವಾಗಿ ಹಿಂದುಳಿದ, ದೀನ ದಲಿತರ ಏಳಿಗೆಗೂ ಸಹ ನಿಜಾಮ್ ಸರ್ಕಾರವು ಸಹಾಯ ಮಾಡಿದೆ.[2] ಇಂತಹ ಸಹಾಯ ಸಹಕಾರದೊಂದಿಗೆ. ಆಧುನಿಕ ಕಾಲದಲ್ಲಿ ಮುಖ್ಯವಾಗಿ 20ನೇ ಶತಮಾನದ ಮೊದಲ ದಶಕದಿಂದಲೇ ನಿಜಾಮ್ ಕರ್ನಾಟಕದ ನಾಡಿನಲ್ಲಿ ದಲಿತ ಚಳವಳಿಗೆ ಬೀಜಗಳು ಬಿದ್ದಿವೆ. ದಲಿತರ ಸರ್ವತೋ ಅಭಿವೃದ್ಧಿಗಾಗಿ ದಲಿತ ಮತ್ತು ದಲಿತೇತರ ನಾಯಕರು ಚಳವಳಿಯ ಮೂಲಕ ನೀಡಿರುವ ಕೊಡುಗೆಗಳ ಕುರಿತು ಈ ಕೆಳಗೆ ವಿವರಿಸಲಾಗಿದೆ.

**ನಿಜಾಮ್ ಕರ್ನಾಟಕದಲ್ಲಿನ ದಲಿತ ಚಳವಳಿಯ ಉದಯಕ್ಕೆ ಮಾನವ ಜೀವನದ ಹಿನ್ನೆಲೆ**

ಸಮಾಜದಲ್ಲಿನ ಜಾತಿವ್ಯವಸ್ಥೆಯ ಉಗಮದ ಹಿನ್ನೆಲೆಲೆಯನ್ನು ಅವಲೋಕಿಸಿದಾಗ ಭೂಮಿಯ ಮೇಲೆ ಮಾನವ ಜೀವನ ಪ್ರಾರಂಭವಾದ ಲಕ್ಷಾಂತರ ವರ್ಷಗಳ ಮೇಲೆ ನಾಗರಿಕತೆ ಅಂಕುರವಾದದ್ದು. ನಾಗರಿಕತೆ ಬೆಳೆಯುವ ಮೊದಲು ಮಾನವನ ಜೀವನ ಹೇಗಿತ್ತೆಂದು ತಿಳಿಯಲು ನಮಗೆ ಆಧಾರಗಳಿಲ್ಲ. ಅಂದಿನ ಮಾನವನಿಗೆ ಬರವಣಿಗೆ ತಿಳಿದಿರಲಿಲ್ಲ. ಬರೆಯುವ ಸಾಮಾಗ್ರಿಗಳು ಇರಲಿಲ್ಲ. ಭೂಮಿಯ ಮೇಲೆ ಮಾನವನ ಜೀವನದ ಇಂದಿನ ಸ್ಥಿತಿಯನ್ನು ಅರ್ಥಮಾಡಿಕೊಳ್ಳಬೇಕಾದರೆ ಆದಿಕಾಲದಿಂದಲೂ ಪ್ರಪಂಚದ ಬೇರೆಬೇರೆ ಪ್ರದೇಶಗಳಲ್ಲಿ ಮಾನವ ವಿಕಾಸವನ್ನು ನೋಡಿ ತಿಳಿಯಬಹುದು. ಮಾನವ ಕೇವಲ 65 ಮಿಲಿಯನ್ ವರ್ಷಗಳ ಹಿಂದಷ್ಟೆ ಕಾಣಿಸಿಕೊಂಡಿರಬಹುದು ಎಂಬ ಊಹೆ ಇದೆ. ಮಾನವ ಇಂದು ಬಹಳಷ್ಟು ಮುಂದುವರಿದವನಾಗಿದ್ದಾನೆ. ಲಕ್ಷಾಂತರ ವರ್ಷಗಳ ಹಿಂದೆ ಮಾನವ ಹೇಗೆ ಜೀವಿಸುತ್ತಿದ್ದ ಎಂಬ ವಿಷಯವನ್ನು ತಿಳಿಸುವ ಚಿತ್ರಗಳನ್ನು ನೋಡಿದಾಗ ಮಾತ್ರ ಪ್ರಾರಂಭದ ಮಾನವನ ಜೀವನ ಕ್ರಮವು ತಿಳಿದುಬರುತ್ತದೆ.

ಮಾನವನು ತನ್ನ ಆರಂಭದ ಜೀವನ ಕ್ರಮದಲ್ಲಿ ಒಂದು ಕಡೆ ನೆಲಸದೆ ಅಲೆಮಾರಿಯಾಗಿ ತನಗೆ ಅನುಕೂಲಕರ ಪ್ರದೇಶದಲ್ಲಿ ಅಲೆದಾಡುತ್ತಾ ಕಾಲ ಕಳೆಯುತ್ತಿದ್ದ. ನಂತರ ಒಂದಡೆ ಶಾಶ್ವತವಾಗಿ ನೆಲೆನಿಂತು ತನಗೆ ಬೇಕಾದ ಆಹಾರ ಪದಾರ್ಥಗಳನ್ನು ತಾನೆ ಬೆಳದು ತಿನ್ನಲು ಪ್ರಾರಂಭಿಸಿದ. ಇದು ಮಾನವನ ಅಲೆಮಾರಿ ಮತ್ತು ಕೃಷಿ ಸಂಸ್ಕೃತಿಗಳ ವಿಕಾಸವನ್ನು ಸೂಚಿಸುತ್ತದೆ. ಶತಶತಮಾನಗಳ ನಂತರ ಜಗತ್ತಿನ ಎಲ್ಲಾ ಕಡೆಯ ಸಾಮಾಜಿಕ ಮತ್ತು ಧಾರ್ಮಿಕ ಹಿನ್ನಲೆಯಂತೆ, ಭಾರತದ ಇತಿಹಾಸದಲ್ಲೂ ಸಾಮಾಜಿಕ ಮತ್ತು ಧಾರ್ಮಿಕ ಹಿನ್ನಲೆಯಲ್ಲಿ ಸೂಕ್ಷ್ಮವಾಗಿ ಗಮನಿಸಿದರೆ ಸಾಮಾಜಿಕ, ಧಾರ್ಮಿಕ ನೆಲೆಯಲ್ಲಿ ಉಳ್ಳವರ ಮೋಸಕ್ಕೆ ಮೇಲು–ಕೀಳಿನ ಸಮಸ್ಯೆಗಳಿಗೆ ಬಲಿಯಾದವರು ಜಗತ್ತಿನ ಶೋಷಿತ ಸಮುದಾಯವಾಗಿದೆ. ಅದು ಇಡೀ ಪ್ರಪಂಚಕ್ಕೆ ಅಂಟಿಕೊಂಡಿರುವ ಸಾಮಾಜಿಕ ಮತ್ತು ಧಾರ್ಮಿಕ ಪಿಡುಗಾಗಿದೆ.

ಅದೇ ರೀತಿ ಭಾರತ ಸಾಮಾಜದಲ್ಲಿ ಜಾತಿವ್ಯವಸ್ಥೆ ಒಂದು ವಿಶೇಷತೆಯಾಗಿ ಹುಟ್ಟಿ ಶತಮಾನಗಳ ಕಾಲ ಬೆಳವಣಿಗೆ ಹೊಂದಿ ಈಗಲೂ ಮುಂದುವರಿಯುತ್ತಿದೆ. ಅನೇಕ ಚಾರಿತ್ರಿಕ, ಧಾರ್ಮಿಕ, ಸಾಂಸ್ಕೃತಿಕ ಕಾರಣಗಳಿಂದ ಅನಾದಿಯಿಂದ ಜನಸಮೂಹಗಳೂ ಈ ದೇಶದಲ್ಲಿ ಜಾತಿ ಆಧರದ ಮೇಲೆ ಕುಲದ ರೂಪದಲ್ಲಿ ವಿಭಜಿತವಾಗಿದೆ. ಹಿಂದೂ ವರ್ಣಾಶ್ರಮ, ಧರ್ಮ ಮತ್ತು ಸಮಾಜದಲ್ಲಿ ಕೆಲವರನ್ನು ಬ್ರಾಹ್ಮಣರನ್ನಾಗಿ, ಕ್ಷತ್ರಿಯರನ್ನಾಗಿ, ವೈಶ್ಯರನ್ನಾಗಿ ಭಗವಂತನು ಸೃಷ್ಟಿಸಿದನೆಂದು ಹೇಳುತ್ತದೆ. ಕರ್ಮಸಿದ್ಧಾಂತವನ್ನು ಆಧಾರಮಾಡಿಕೊಂಡು ಹಿಂದೂ ಧರ್ಮ ಏಣಿಯಾ ಮೆಟ್ಟಿಲ ಸಮಾಜವನ್ನು ಸಮರ್ಥಿಸಿದೆ. ಆದರೆ ಹಿಂದೂ ಐಡಿಯಾಲಜಿಯನ್ನು ವರ್ಣಾಶ್ರಮ ಧರ್ಮವನ್ನು ನಿರಾಕರಿಸುತ್ತಾ ಪ್ರಾಚೀನ ಭಾರತದಲ್ಲಿ ಮುಖ್ಯವಾಗಿ ಕ್ರಿ.ಪೂ. 6ನೇ ಶತಮಾನದಿಂದ ದಮನಿತ ಜಾತಿಗಳು ಅನೇಕ ಸೈದ್ಧಾಂತಿಕ ಹೋರಾಟಗಳನ್ನು ಮಾಡಿವೆ. ಆದ್ದರಿಂದಲೇ ಭಾರತದ ಚರಿತ್ರೆಯಲ್ಲಿ ಗುಲಾಮರಾಗಿ, ಚಂಡಾಲರಾಗಿ, ಪಂಚಮರಾಗಿ, ಅಸ್ಪೃಶ್ಯರಾಗಿ ಅನೇಕ ಪ್ರತ್ಯೇಕಗಳೊಂದಿಗೆ ದಮನಿತರಾಗಿ ಉದುಗಿಹೋದ ಕೆಳಜಾತಿಯವರು ಶೋಷಣೆಯ ವಿರುದ್ಧ ನಡೆಸಿದ ಮಹೋಜ್ವಲ ಹೋರಾಟಗಳ ದೃಷ್ಟಾಂತಗಳಿವೆ. ವಿಶೇಷವಾಗಿ ಪ್ರಾಚೀನ ಭಾರತದಲ್ಲಿ ವರ್ಣಧರ್ಮದ ಹೆಸರಿನಿಂದ ಮುಂದುವರೆಸಿದ ಅಮಾನುಷ ಅಮಾನವೀಯ ಆಚಾರಗಳು

ಮತ್ತು ಸಂಪ್ರದಾಯಗಳು, ಬಡವರು ಶ್ರೀಮಂತರು, ಕಪ್ಪು ಬಣ್ಣದವರು, ಹೆಣ್ಣು–ಗಂಡು ಈ ಬಗೆಯ ತಾರತಮ್ಯಗಳು ಮನುಷ್ಯ ಸಂಸ್ಕೃತಿಯೊಂದಿಗೆ ಹುಟ್ಟಿಕೊಂಡು ಬಂದಿವೆ. ಇದರೊಂದಿಗೆ ಜಾತಿವ್ಯವಸ್ಥೆ ಕೈಗೂಡಿಸಿದ ಕಾರಣ, ಭಾರತದಂತಹ ದೇಶದಲ್ಲಿ ಈ ಪಿಡುಗು ಇನ್ನಷ್ಟು ಭಯನಕವಾಗಿ ಕಾಡುತ್ತಾ ಬಂದಿದೆ. ನೈಸರ್ಗಿಕವಾದ ಹುಟ್ಟಿಗೆ ಅನೈಸರ್ಗಿಕವಾದ ಜಾತಿಯ ಹಣೆಪಟ್ಟಿಯನ್ನು ಕಟ್ಟುತ್ತಾ ಬಂದಿರುವುದು ಭಾರತದ ಬೌದ್ಧಿಕತೆಯ ಒಂದು ದುರಂತ ಮುಖವಾಗಿದೆ.[3] ಮನುಷ್ಯನ ಬುದ್ಧಿ ಬೆಳೆದಂತೆಲ್ಲಾ ಈ ಬಗೆಯ ಕಂದಕಗಳು ಕಡಿಮೆಯಾಗಬೇಕಾಗಿತ್ತು. ಆದರೆ ವಿಪರ್ಯಾಸವೆಂದರೆ 19 ಮತ್ತು 20ನೇ ಶತಮಾನದಲ್ಲೂ ಕೂಡ ಇಂತಹ ತಲೆಬುಡವಿಲ್ಲದ ತಿಳುವಳಿಕೆಗಳು ಅತ್ಯಂತ ಪ್ರಭಾವಶಾಲಿಯಾಗಿ ಪ್ರಚಲಿತದಲ್ಲಿವೆ.

**ಸೈದ್ಧಾಂತಿಕ ಘಟನೆಗಳು ಹಾಗೂ ಕೆಲವು ಪ್ರೇರಣೆಗಳು**

ನಿಜಾಮ್ ಕರ್ನಾಟಕದ ದಲಿತ ಚಳವಳಿಯ ಉದಯ ಮತ್ತು ದಲಿತರ ಅಭಿವೃದ್ಧಿಗಾಗಿ ಅವರು ಶ್ರಮಿಸಲು ಈ ಮುಂದಿನ ಕೆಲವು ಸೈದ್ಧಾಂತಿಕ ಘಟನೆಗಳು ಹಾಗೂ ಕೆಲವು ಪ್ರೇರಣೆಗಳು ಕಾರಣವಾಗಿವೆ. ಯಾವುದೇ ಒಂದು ಹೋರಾಟ ಅಥವಾ ಒಂದು ಚಳವಳಿಯು ಮಾನವ ಇತಿಹಾಸದಲ್ಲಿ ರೂಪುಗೊಳ್ಳಬೇಕಾದರೆ ಅದಕ್ಕೆ ಪ್ರೇರಣೆ ಮತ್ತು ಕೆಲವು ಸೈದ್ಧಾಂತಿಕವಾದ ಘಟನೆಗಳ ಹಿನ್ನಲೆ ಅತಿ ಅವಶ್ಯಕ. ಹಾಗಾಗಿ ನಿಜಾಮ್ ಕರ್ನಾಟಕ ರಾಜ್ಯದ ದಲಿತ ಚಳವಳಿಯು ಸಹ ಹಲವಾರು ಸೈದ್ಧಾಂತಿಕ ಘಟನೆಗಳು ಹಾಗೂ ಪ್ರೇರಣೆಯ ಹಿನ್ನೆಲೆಯನ್ನು ಹೊಂದಿರುವುದನ್ನು ಕಾಣಬಹುದಾಗಿದೆ. ಸಮಾಜದಲ್ಲಿ ಇರುವ ಅಸಮಾನತೆ ಅವ್ಯವಸ್ಥೆಯನ್ನು ಬುಡ ಸಮೇತ ಕೀಳಲು ಭಾರತದಲ್ಲಿ 6ನೇ ಶತಮಾನದಲ್ಲಿಯೇ ಗೌತಮ ಬುದ್ಧನು ತಮ್ಮ ವೈಚಾರಿಕ ಮತ್ತು ವೈಜ್ಞಾನಿಕ ತತ್ವಸಿದ್ಧಾಂತಗಳಿಂದ ಸಮಾನತೆಗಾಗಿ ಧಮ್ಮ ಚಳವಳಿಯನ್ನು ಆರಂಭಿಸಿದ್ದಾರೆ. ಅದೇ ರೀತಿಯಾಗಿ 12ನೇ ಶತಮಾನದಲ್ಲಿ ವಚನ ಚಳವಳಿಯ ಮೂಲಕ ಸಮಾನತೆ ತರಲು ಸಮಸಮಾಜದ ನಿರ್ಮಾಣಕ್ಕಾಗಿ ನಿಜಾಮ್ ಕರ್ನಾಟಕ ಪ್ರದೇಶದಲ್ಲಿ ಬಸವಣ್ಣನವರು ದುಡಿದಿರುವುದನ್ನು ಗುರುತಿಸಲಾಗುತ್ತಿದೆ. ಹಾಗೆಯೇ ಮುಂದುವರಿದು ಕನಕದಾಸರು, ನಂದನರ್ ನಾನಕ್, ಚೋಕಮೇಳ, ಜ್ಯೋತಿಬಾ ಫುಲೆ, ಶಾಹು ಮಹಾರಾಜ್, ಸಯ್ಯಾಜಿ ರಾವ್ ಗಾಯ್ಕವಾಡ್, ನಾಲ್ವಡಿ ಕೃಷ್ಣರಾಜ ಒಡೆಯರ್, ಲೋಹಿಯಾ, ಡಾ. ಬಿ.ಆರ್. ಅಂಬೇಡ್ಕರ್, ಸಹ ದಲಿತರ ಸಮಾನತೆಗೋಸ್ಕರ ದುಡಿದಿರುವುದನ್ನು ಕಾಣುತ್ತೇವೆ.[4]

**ಜಗತ್ತಿನ ಬೇರೆ ಬೇರೆ ರಾಷ್ಟ್ರಗಳಲ್ಲಿನ ಸೈದ್ಧಾಂತಿಕ ಚಿಂತನೆಗಳ ಪಾತ್ರ**

ನಿಜಾಮ್ ಕರ್ನಾಟಕದ ದಲಿತ ಚಳವಳಿಯ ಉದಯಕ್ಕೆ ಈ ಮೇಲಿನ ಸ್ಥಳೀಯ ಬೆಳವಣಿಗೆಗಳಷ್ಟೇ ಅಲ್ಲದೆ ಜಗತ್ತಿನ ಬೇರೆ ಬೇರೆ ರಾಷ್ಟ್ರಗಳಲ್ಲಿ ಸ್ವಾತಂತ್ರ್ಯ ಮತ್ತು ಸಮಾನತೆಗಾಗಿ ನಡೆದ ಕ್ರಾಂತಿಗಳು ಇನ್ನೊಂದು ಬಹುಮುಖ್ಯ ಪ್ರೇರಣೆಯಾಗಿವೆ. ಇವುಗಳಲ್ಲಿ ಪ್ರಮುಖವಾದವುಗಳೆಂದರೆ 1775–1784ರಲ್ಲಿ ನಡೆದ ಅಮೇರಿಕಾ ಕ್ರಾಂತಿ, 1789–1799ರಲ್ಲಿ ನಡೆದ ಫ್ರೆಂಚ್ ಕ್ರಾಂತಿ, 1917–1923ರಲ್ಲಿ ನಡೆದ ರಷ್ಯ ಕ್ರಾಂತಿ ಈ ಕ್ರಾಂತಿಗಳ ಪ್ರಮುಖ ಘೋಷಣೆಗಳು ಅತ್ಯಂತ ಮಹತ್ವ ಪಡೆದುಕೊಂಡಿವೆ. ಆ ಅಂಶಗಳು ಅಂದರೆ 1775–1784ರಲ್ಲಿ ನಡೆದ ಅಮೇರಿಕಾ ದೇಶದ ಮಹಾನ್ ಕ್ರಾಂತಿಯ ಘೋಷಣೆಯಾದ ಎಲ್ಲಾ ಮನುಷ್ಯರನ್ನು ಸಮಾನವಾಗಿ ಸೃಷ್ಟಿಸಲಾಗಿದೆ ಎಂಬ ಅಂಶ, 1789ರಲ್ಲಿ ಪ್ರಾರಂಭವಾಗಿ 1799ರಲ್ಲಿ ಕೊನೆಗೊಂಡ ಫ್ರೆಂಚ್ ಮಹಾಕ್ರಾಂತಿಯ ಮಹಾನ್ ಘೋಷಣೆಯಾದ ಸ್ವಾತಂತ್ರ್ಯ ಸಮಾನತೆ ಮತ್ತು

ಸಹೋದರತ್ವ ಎಂಬ ಪ್ರಮುಖ ಅಂಶ, 1917–1923ರಲ್ಲಿ ನಡೆದ ರಷ್ಯ ಕ್ರಾಂತಿಯು ಜಗತ್ತಿಗೆ ನೀಡಿದ ಮಹಾನ್ ಘೋಷಣೆಯಾದ ಸಾಮರ್ಥ್ಯಕ್ಕೆ ಅನುಸಾರವಾಗಿ ದುಡಿಯಬೇಕು. ಅಗತ್ಯಕ್ಕೆ ತಕ್ಕಂತೆ ಗಳಿಸಬೇಕು ಮತ್ತು ಪರಿಪೂರ್ಣ ಪ್ರಜಾಪ್ರಭುತ್ವಕ್ಕೆ ದಾರಿ ನೀಡಿ ರಾಜಕೀಯ ಹಕ್ಕುಗಳ ಜೊತೆಗೆ ಆರ್ಥಿಕ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಹಕ್ಕುಗಳನ್ನು ನೀಡಬೇಕು ಎನ್ನುವ ತಾತ್ಪರ್ಯ ನೀಡಿದ್ದು, ಭೂಮಿ, ನೀರು, ಖನಿಜ ಹಾಗೂ ಇತರ ನೈಸರ್ಗಿಕ ಸಂಪತ್ತು ಇಡೀ ಮಾನವ ಸಮುದಾಯಕ್ಕೆ ಸೇರಿದ್ದು, ಈ ಭೂಮಿ, ಮೇಲಿನ ಪ್ರತಿಯೊಬ್ಬ ಪ್ರಜೆಗೂ ಇದರಲ್ಲಿ ಹಕ್ಕು ಇದೆ ಎಂದು ಘೋಷಣೆ ನೀಡಿರುವ ಅಂಶಗಳ ಹಿನ್ನಲೆಯು ನಿಜಾಮ್ ಕರ್ನಾಟಕದ ದಲಿತ ಚಳವಳಿಯ ಉದಯಕ್ಕೆ ಹಿನ್ನಲೆಯ ಕಾರಣವಾಗಿದ್ದಾವೆ ಎನ್ನಬಹುದಾಗಿದೆ.[5]

**ಪ್ರಾದೇಶಿಕವಾಗಿ ದಲಿತ ಚಳವಳಿ ಉದಯಿಸಲು ಕಾರಣವಾದ ಸೈದ್ಧಾಂತಿಕ ಚಿಂತನೆಗಳ ಪಾತ್ರ**

ಆಧುನಿಕ ಭಾರತದ ಸಾಮಾಜಿಕ ಮತ್ತು ಧಾರ್ಮಿಕ ಹಿನ್ನಲೆಯನ್ನು ನೋಡಿದಾಗ ದಲಿತ ಚಳವಳಿಯು ಪ್ರಾದೇಶಿಕ ನೆಲೆಯಲ್ಲಿ ಹುಟ್ಟಲು ಈ ಮೇಲೆ ತಿಳಿಸಿರುವ ಪ್ರಮುಖ ಸಾಮಾಜಿಕ ಮತ್ತು ಧಾರ್ಮಿಕ ಚಿಂತಕರುಗಳು ಹಾಗೂ ವಿಶೇಷವಾಗಿ ಪ್ರಾದೇಶಿಕವಾಗಿ ದಲಿತರಿಗಾಗಿ ಚಳವಳಿಯು ಆರಂಭವಾದದ್ದು ಪ್ರಾದೇಶಿಕ ನೆಲೆಯಲ್ಲಿನ ಪ್ರಗತಿಪರರನ್ನು, ವಿದ್ಯಾವಂತರನ್ನು ಸೇರಿಸಿ 1873ರ ಸುಮಾರಿಗೆ ಸತ್ಯಶೋಧಕ ಸಮಾಜವನ್ನು ಸ್ಥಾಪಿಸಿ ಜ್ಯೋತಿಬಾ ಫುಲೆ ಅವರು ಶೋಷಿತ ವರ್ಗದವರನ್ನು ಮೇಲೆತ್ತುವ ಪ್ರಯತ್ನವನ್ನು ಡಾ. ಬಿ.ಆರ್.ಅಂಬೇಡ್ಕರ್ ಅವರಿಗಿಂತಲೂ ಮೊದಲೆ ಆರಂಭ ಮಾಡಿದ್ದರು. ಈ ಸತ್ಯಶೋಧಕ ಸಮಾಜದ ಮೂಲಕ ಚಳವಳಿ ಆರಂಭಿಸಿದರು. ಇದು ಕೆಳಜಾತಿಯವರು, ಸ್ತ್ರೀಯರು, ಶೂದ್ರರಿಗೆ ತಮ್ಮ ಹಕ್ಕುಗಳ ಬಗ್ಗೆ ತಿಳಿಸುವುದು ಮತ್ತು ತಮ್ಮ ಮೇಲಾಗುತ್ತಿರುವ ಶೋಷಣೆಯನ್ನು ತಪ್ಪಿಸುವುದು, ಜಾತಿಪದ್ಧತಿಯನ್ನು ನಿರ್ಮೂಲನೆ ಮಾಡಿ ಮನುಷ್ಯರಲ್ಲಿ ಆನಂದವನ್ನು, ಏಕತೆ, ಸಮಾನತೆಯನ್ನು ಸುಲಭವಾದ ಮತ್ತು ಸರಳವಾದ ಸಂಪ್ರದಾಯಗಳನ್ನು ನೆಲೆಗೊಳಿಸುವುದು ಈ ಸತ್ಯಶೋಧಕ ಸಮಾಜದ ಧ್ಯೇಯೋದ್ದೇಶವಾಗಿತ್ತು.

ಸಮಾಜದ ತತ್ವ ಮತ್ತು ನೀತಿಗಳನ್ನು ಪುಣೆಯಿಂದ ಪ್ರಕಟಗೊಳ್ಳುವ ದೀನಬಂಧು ಪತ್ರಿಕೆಯ ಮುಖವಾಣಿಯಾಗಿತ್ತು. ಸತ್ಯ ಶೋಧಕ ಸಮಾಜವು ಪುರೋಹಿತ ಶಾಹಿಯನ್ನು ದಿಕ್ಕರಿಸಿತು. ಈ ಸತ್ಯಶೋಧಕ ಸಮಾಜದಲ್ಲಿ ಎಲ್ಲಾ ಜಾತಿಯ ಜನರು ಸದಸ್ಯರಾಗಿದ್ದರು. ಮುಸಲ್ಮಾನರು, ಬ್ರಾಹ್ಮಣರು, ಉದ್ಯೋಗಿಗಳು, ಅಬ್ರಾಹ್ಮಣರು ಇದ್ದರು ಮತ್ತು ಮಹಾತ್ಮ ಜ್ಯೋತಿಬಾ ಫುಲೆ ಅವರ ಮಾಲಿ ಜಾತಿಯ ಜನರು ಇದ್ದರು. ಸತ್ಯ ಶೋಧಕ ಸಮಾಜದ ಮಹಿಳಾ ವಿಭಾಗದಲ್ಲಿ ಸಾವಿತ್ರಿ ಬಾಯಿ ಫುಲೆ ಅವರು ನೋಡಿಕೊಳ್ಳುತ್ತಿದ್ದರು. ಈ ರೀತಿಯಾಗಿ ಸ್ವಾತಂತ್ರ್ಯ ಪೂರ್ವದಲ್ಲೆ ದಲಿತರ ಸ್ಥಿತಿಗತಿಗಳನ್ನು ಅಧ್ಯಯನ ಮಾಡುತ್ತಾ ದಲಿತರಲ್ಲಿ ಜಾಗೃತಿ ಮೂಡಿಸುವ ಪ್ರಯತ್ನವನ್ನು ಪ್ರಾದೇಶಿಕ ನೆಲೆಯಲ್ಲಿ ಚಳವಳಿಗೆ ಹಿಂಬು ನೀಡಿರುವುದು ಮುಂದೆ ಜ್ಯೋತಿಬಾ ಫುಲೆ ಅವರ ಪ್ರಭಾವ ಮತ್ತು ಪ್ರೇರಣೆಗೆ ಒಳಗಾಗಿ ದಲಿತರ ಸಾಮಾಜಿಕ, ಧಾರ್ಮಿಕ, ಆರ್ಥಿಕ, ರಾಜಕೀಯ ಹಕ್ಕುಗಳನ್ನು ನೀಡುವುದಕ್ಕಾಗಿ ನಿಜಾಮ್ ಕರ್ನಾಟಕದ ಪ್ರದೇಶದಲ್ಲಿಯು ಅನೇಕ ದಲಿತ ಮತ್ತು ದಲಿತೇತರ ನಾಯಕರು ಪ್ರಯತ್ನಿಸಿದರು. 19ನೇ ಶತಮಾನದಲ್ಲಿ ದಲಿತ ಚಳವಳಿಗೆ ಒಂದು ಆಯಾಮವನ್ನು ತಂದುಕೊಟ್ಟವರು ಕೂಡ ಜ್ಯೋತಿಬಾ ಫುಲೆ ಅವರೇ. ಇದು ಮಹಾರಾಷ್ಟ್ರ, ಮುಂಬೈ ಕರ್ನಾಟಕ ಹಾಗೂ ವಿಶೇಷವಾಗಿ ನನ್ನ ಪ್ರಸ್ತುತ ಅಧ್ಯಯನ ಪ್ರದೇಶವಾದ ನಿಜಾಮ್ ಕರ್ನಾಟಕದಲ್ಲಿನ ದಲಿತ ಚಳವಳಿಯ ಉದಯಕ್ಕೆ ಪ್ರೇರಣಾ ಶಕ್ತಿಯಾಯಿತು. ಇದರ ಫಲವಾಗಿ ದಲಿತ

ಚಳವಳಿಯ ನಾಯಕರು ನಿಜಾಮ್ ಹೈದರಾಬಾದ್ ಸಂಸ್ಥಾದಲ್ಲಿ ಮತ್ತು ನಿಜಾಮ್ ಕರ್ನಾಟಕದ ಭಾಗದಲ್ಲಿ ಹುಟ್ಟಿಕೊಳ್ಳುತ್ತಾರೆ.[6]

**ನಿಜಾಮ್ ಸಂಸ್ಥಾನದಲ್ಲಿನ ದಲಿತ ಮತ್ತು ದಲಿತೇತರ ನಾಯಕರ ಚಿಂತನೆಗಳ ಪಾತ್ರ**

ಇವರ ಸ್ಪೂರ್ತಿಯಿಂದಾಗಿ ಭಾಗೆರೆಡ್ಡಿ ವರ್ಮ ಅವರು ದಲಿತರೆ ಈ ದೇಶದ ಮೂಲನಿವಾಸಿಗಳು ಎಂದು ಹೇಳುತ್ತಾ ದಲಿತರಲ್ಲಿ ಹೊಸ ಚೈತನ್ಯ ಮೂಡಿಸಿದ ಇವರು ಡಾ. ಬಿ.ಆರ್. ಅಂಬೇಡ್ಕರ್ ಅವರು ದಲಿತ ಹೋರಾಟಕ್ಕೆ ಬರುವ ಮುಂಚೆಯೇ ಫುಲೆ ಅವರ ಪ್ರಭಾವ ಮತ್ತು ಪ್ರೇರಣೆಯಿಂದ ದಲಿತರ ಅಭಿವೃದ್ಧಿಗಾಗಿ ಸೇವೆ ಸಲ್ಲಿಸಿದರು. ಇವರ ಜೊತೆ ಗೂಡಿದ ಅನೇಕ ದಲಿತ ಹಾಗೂ ದಲಿತೇತರ ನಾಯಕರುಗಳು ನಿಜಾಮ್ ಹೈದರಾಬಾದ್ ಸಂಸ್ಥಾನದಲ್ಲಿ ಅವರ ಜೀವಿತ ಅವಧಿಯವರೆಗೂ ಇನ್ನು ಕೆಲವರು ಅವರ ಮರಣದ ನಂತರವು ದಲಿತರ ಅಭಿವೃದ್ಧಿಗಾಗಿ ತಮ್ಮ ಸೇವೆಯನ್ನು ಸಲ್ಲಿಸಿದರು ಅವರುಗಳೆಂದರೆ ಡಾ. ಬಿ.ಆರ್.ಅಂಬೇಡ್ಕರ್, ಹನುಮಪ್ಪ ಶ್ರಯಸ್ಕರ್, ಬಿ.ಎಸ್.ವೆಂಕಟರಾವ್, ಪಿ.ಆರ್. ವೆಂಕಟಸ್ವಾಮಿ, ಚಲ್ಲಪ್ಪ ಮೇಸ್ತ್ರೀ, ಕುಸುಮ ಧರ್ಮನ್, ಗುರಂ ಜಾಸುವ, ಇರ್ಚಪ್ಪನ್,ಸುಂಕಮ್ ಅಚಲು, ಬಿ.ವಿ ರಮಣಯ್ಯ, ಭೋವಿ ಭೀಮಣ್ಣ, ಶಹಿಕ್ ನಜಿರ್, ಎಸ್.ರಾಷ್ಟ್ರಪಾಲ್, ಜೆ ಈಶ್ವರಿಬಾಯಿ, ಸದಾಲಕ್ಷ್ಮೀ, ಯಂಡ್ಲೂರು ಚನ್ನಯ್ಯ, ನಂದನ್ ಆರ್. ಹರಿ, ಎಂ.ಬಿ.ಗೌತಮ್, ಬೊಲ ಬಾಗಪ್ಪ, ರೈಬಲ್ ಮುಕುಂದ, ವಿಶೇಷವಾಗಿ ದಲಿತರ ಅಭಿವೃದ್ಧಿಗಾಗಿ ಈ ಎಲ್ಲಾ ಮೇಲಿನ ನಾಯಕರುಗಳು ಅನುಸರಿಸಿದ ಕ್ರಮಗಳೆಂದರೆ ಅಸ್ಪೃಶ್ಯತೆ ನಿವಾರಣೆ, ಸ್ತ್ರೀವಿಮೋಚನೆ, ಜೋಗಿನಿ ಮತ್ತು ದೇವದಾಸಿ ಪದ್ಧತಿ ನಿಷೇಧ, ದಲಿತರ ಭೂಮಿಯ ಹಕ್ಕಿಗಾಗಿ ಹೊರಾಟ, ಕುಡಿಯುವ ನೀರಿನ ಬಾವಿ ಬಳಕೆ ನಿಷೇಧ, ದೇವಸ್ಥಾನ ಪ್ರವೇಶ ನಿಷೇಧ, ಗ್ರಾಮ ಕ್ಷೌರಿಕರು ಕ್ಷೌರ ಮಾಡುವುದು ನಿಷೇಧ, ದರ್ಜಿಗಳು ಬಟ್ಟೆ ಅಳೆದುಕೊಳ್ಳಲು ಅಡಚಣೆ, ಬಟ್ಟೆ ಮುಟ್ಟಲು ಅಗಸರ ತಿರಸ್ಕಾರ, ಪ್ರಯಾಣ ಸಾಧನಗಳಲ್ಲಿ ಪ್ರವೇಶವಿಲ್ಲದಿರುವುದು, ಸ್ಮಶಾನಗಳಲ್ಲಿ ಪ್ರವೇಶವನ್ನು ತಡೆದಿರುವುದಕ್ಕಾಗಿ ಹೊರಾಟ, ದಲಿತರು ಚಪ್ಪಲಿ ಧರಿಸಿ ಬೀದಿಯಲ್ಲಿ ನಡೆಯುದು ನಿಷೇಧ, ದಲಿತರು ಗ್ರಾಮ ಬೀದಿಗಳ ಗುಂಟ ಶವಯಾತ್ರೆ ನಡೆಸುವುದು, ದಲಿತರು ಗ್ರಾಮದ ಗುಂಟ ಮದುವೆ ಮೆರವಣಿಗೆ ನಡೆಸುವುದು ಸಹಪಂಕ್ತಿ ಭೋಜನಗಳ ನಿಷೇಧ, ದಲಿತೇತರ ಮನೆಗಳಲ್ಲಿ ಪ್ರವೇಶಿಸಲು ನಿಷೇಧ, ಹೋಟೆಲ್ ಪ್ರವೇಶಕ್ಕೆ ಅಡಚಣೆ ಮತ್ತು ಹೋಟಲ್‌ನಲ್ಲಿ ಪ್ರತ್ಯೇಕ ಟೀ ಲೋಟ ಪಾತ್ರೆಗಳು ಇಡುವುದರ ವಿರುದ್ಧ ಹೋರಾಟ ಹೀಗೆ ಇನ್ನೂ ಅನೇಕ ದಲಿತರ ವಿರೋಧಿ ನೀತಿಗಳಾದ ಮೇಲ್ವರ್ಗದವರ ಆಚರಣೆಗಳು ಮತ್ತು ಸಂಪ್ರದಾಯಗಳ ವಿರುದ್ಧ ಪ್ರತಿಭಟಿಸಿದರು ಹಾಗೂ ದಲಿತರ ಮಕ್ಕಳ ಶಿಕ್ಷಣ ನೀಡುವುದಕ್ಕಾಗಿ ಶಾಲೆಗಳನ್ನು ನಿರ್ಮಾಣ ಮಾಡಿದರು.

**ನಿಜಾಮ್ ಕರ್ನಾಟಕದಲ್ಲಿನ ಪ್ರಮುಖ ದಲಿತ ಮತ್ತು ದಲಿತೇತರ ನಾಯಕರುಗಳ ಚಿಂತನೆಗಳ ಪಾತ್ರ**

ಈ ರೀತಿಯ ಅಂಶಗಳ ಪ್ರಾಭಾವಕ್ಕೆ ಒಳಗಾದ ನಿಜಾಮ್ ಕರ್ನಾಟಕಲ್ಲಿಯೂ ಅನೇಕ ದಲಿತ ಮತ್ತು ದಲಿತೇತರ ನಾಯಕರುಗಳಾದ ಬಿ. ಶ್ಯಾಮ್ ಸುಂದರ್, ಶಿವರಾಮ್ ಮೋಘಾ, ಕಾಶಿನಾಥ್ ಇಲಾಲ್ಪೂರ, ವಿಠ್ಲ್ ಚಾಂಬಾಲ್, ಚಂದ್ರಕಾಂತ, ಗೋಪಿನಾಥ್ ಮಹಾರಾಜ್, ಮಹಾದೇವನಾಥ್ ಸಿಂಧೆ, ರಾಮಾನಾಥ್ ಭಾವ, ಭಜರಂಗ್ ಮಹಾರಾಜ್, ರಾಮಚಂದ್ರಪ್ಪ, ಬಿ.ಪ್ರೇಮದಾಸ್, ಪಲಾಯಾಮ್ ಪಿಲ್ಲಾಯಿ, ಎಸ್.ಆರ್.ಬಾಬಯ್ಯ, ಸೋಪಾನರಾಜ್ ದನ್ವೆ, ತುಕಾರಾಮ್ ಘಾತೆ, ಎಸ್.ಎಂ.ಕಟ್ಟಿ, ನಾಯಾಣ ಮೂರ್ತಿ.

ಇಸ್ಮಾಯಿಲಪ್ಪ ಸಿಂಧೆ, ಭಿಮಣ್ಣ ಪುಂಗೆ, ರಾಮಚಂದ್ರ ಸೇನಿ, ಫಾಳಪ್ಪ ಕೆಳಕೇರಿ, ಬಸಪ್ಪ ಹೊಸಮನಿ, ವಾಡಿಯ ಅಮೃತರಾವ್ ಕೊಮಟೆ, ಟೊಪಣ್ಣ ಕೊಮಟೆ ಈ ಎಲ್ಲಾ ನಾಯಕರುಗಳು ಸಹ ಈ ಮೇಲಿನ ಅಂಶಗಳು ಮತ್ತು ಇನ್ನಿತರ ಅಂಶಗಳಾದ ದಲಿತರ ಸಮಾಜಿಕ ಅಸಮಾನತೆ, ದಲಿತರ ರಾಜಕೀಯ ಸಬಲತೆ, ಧಾರ್ಮಿಕ ಅಸಮಾನತೆ, ದಲಿತರ ಆರ್ಥಿಕ ದುರ್ಬಲತೆ, ದಲಿತರ ಭೂ ಒಡೆತನ, ದಲಿತರ ಶೈಕ್ಷಣಿಕ ಸುಧಾರಣೆಗಾಗಿ  ಹಾಗೂ ದಲಿತರ ಸರ್ವತೋಮುಖ ಅಭಿವೃದ್ಧಿಗಾಗಿ ಸೇವೆ ಸಲ್ಲಿಸಿದರು. ಈ ರೀತಿಯಾಗಿ ದಲಿತರ ಏಳಿಗೆಗಾಗಿ ಚಳವಳಿ ನಡೆಸಿರುವುದು ತಿಳಿದುಬರುತ್ತದೆ. ಹಾಗೂ ಇಲ್ಲಿನ ದಲಿತ ಚಳವಳಿಗೆ ನಿಜಾಮ್ ಸರ್ಕಾರದ  ಸಹಕಾರವು ಕೂಡ ಅತ್ಯಂತ ಮಹತ್ವದಾಗಿದೆ. ಇಂತಹ ಹಲವು ಅಂಶಗಳು ಅಲ್ಲದೆ ಇನ್ನೂ ಪ್ರಮುಖ ಅಂಶಗಳು ಆಧುನಿಕ ಕಾಲದಲ್ಲಿ ನಿಜಾಮ್ ಕರ್ನಾಟಕದಲ್ಲಿ ಕೆರಳಿದ ದಲಿತ ಚಳವಳಿಗೆ ಒಂದು ವಿಶೇಷ ಗತಿ, ದಿಕ್ಕುದೆಸೆಗಳಿವೆ ಅವುಗಳೆಂದರೆ ದಲಿತರ ವಿಮೋಚನೆ, ದಲಿತರಿಗೆ ಅಧಿಕಾರ, ವರ್ಗವ್ಯವಸ್ಥೆಯ ಅಂತ್ಯ, ಜಾತಿ ವಿರೋಧ ಕ್ರಮಗಳೊ ಸೇರಿವೆ.[7]

ನಿಜಾಮ್ ಹೈದರಾಬಾದ್ ಸಂಸ್ಥಾನದ ದಲಿತ ಚಳವಳಿ ಮತ್ತು ನಿಜಾಮ್  ಕರ್ನಾಟಕದಲ್ಲಿ ದಲಿತ ಚಳವಳಿಯ ಚಾರಿತ್ರಿಕ ಅಂಶಗಳನ್ನು ಅವಲೋಕಿಸಿದಾಗ ಭಾರತದ ಸಾಮಾಜಿಕ ಅಸಮಾನತೆಯನ್ನು ಹೋಗಲಾಡಿಸುವಲ್ಲಿ ರಾಷ್ಟ್ರೀಯ ನೆಲೆಯಲ್ಲಿ ಅನೇಕ ಸಮಾಜ ಸುಧಾರಕರು ಆಗಿಹೋಗಿದ್ದಾರೆ. ಅದರಂತೆ ಚಳವಳಿಗಳು ಪ್ರಾದೇಶಿಕ ನೆಲೆಯಲ್ಲಿ ಹುಟ್ಟಿ ಗುರುತರವಾದ ಜವಬ್ದಾರಿಯನ್ನು ಪೂರೈಸಿದ್ದಲ್ಲದೆ ಅನುಕರಣಿಯವಾಗಿ ಉಳಿದುಕೊಂಡಿವೆ. ಅಂತಹ ಪ್ರಾದೇಶಿಕ ಚಳವಳಿಗಳಿಗೆ ನೆಲ ನಿಜಾಮ್ ಕರ್ನಾಟಕ ರಾಜ್ಯ ಹಿಗಾಗಿ ಅದು ಕರ್ನಾಟಕ ಮತ್ತು ಭಾರತದಲ್ಲಿಯೇ ವಿಶಿಷ್ಟ ಪ್ರದೇಶವೆನಿಸಿದೆ. ಸಮಾಜೋಧಾರ್ಮಿಕ ನೆಲೆಯಲ್ಲಿ ಕ್ರಾಂತಿಯನ್ನು ಮಾಡಿದ ಬಸವ ಹಾಗೂ ಬಸವಾದಿ ಶರಣರ ವಚನ ಚಳವಳಿ ದೇಶದಲ್ಲಿಯೇ ಮಾದರಿಯಾಗಿ ಉಳಿದಿರುವಂತಹದ್ದು. ಅಸ್ಪೃಶ್ಯತೆಯಂತಹ ಕ್ರೂರ ವ್ಯವಸ್ಥೆಯನ್ನು ಹೋಗಲಾಡಿಸುವಲ್ಲಿ ದಿಟ್ಟ ಚಿಂತನೆಗಳ ಮೂಲಕ ಯಶಸ್ಸನ್ನು ಪಡೆಯಿತು. ಸನಾತನರ ಕುತಂತ್ರಕ್ಕೆ ಬಲಿಯಾಗಿ ಊರಾಚೆ ಕೊಳಚೆ ಪ್ರದೇಶದಲ್ಲಿ ವಾಸಿಸುತ್ತಿದ್ದ ಅಸ್ಪೃಶ್ಯರನ್ನು ಶರಣತ್ವದೆಡೆಗೆ ಬಸವ ನೇತೃತ್ವದ ಕ್ರಾಂತಿ ಅದೊಂದು ಮಾನವಕುಲಕ್ಕೆ ಮಹತ್ತರ ಕೊಡುಗೆ ಎಂದು ಭಾವಿಸಲಾಗಿದೆ. ವಚನ ಚಳವಳಿಯ ನಂತರ ಇದೇ ನೆಲದಲ್ಲಿ ಮಹತ್ತರವಾದ ಸಮಾಜಮುಖಿ ಚಿಂತನೆ ನಡೆಸಿದವರು ದಾಸರು. ಸಾಮಾನ್ಯರ ಆಡು ಭಾಷೆಯಲ್ಲಿಯೇ ಹಾಡುಗಳನ್ನು ರಚಿಸುವುದರ ಮೂಲಕ ಕುಲಗೋತ್ರಗಳ ಮೇಲುಕೀಳುಗಳನ್ನು ಟೀಕಿಸಿದರು. ಪುರಂದರದಾಸರು ಹಾಗೂ ಕನಕದಾಸರು ಪ್ರಮುಖರು ಮಾನವಕುಲವನ್ನು ಸಮಾನ ನೆಲೆಯಲ್ಲಿ ತೂಗಿನೋಡಿದರು. ಕುಲಜಾತಿಗಳಲ್ಲಿ ಭೇದಗಳನ್ನು ತೊಡೆದು ಹಾಕುವುದರ ಮೂಲಕ ಹೊಸ ಸಮಾಜದ ನಿರ್ಮಾಣದೊಂದಿಗೆ ಮನುಷ್ಯನ ಮನಸ್ಸುಗಳನ್ನು ಕಟ್ಟುವ ಕೆಲಸ ಮಾಡಿದ್ದಾರೆ. ಹಿಗಾಗಿ ಈ ನಾಡಿಗೆ, ದೇಶಕ್ಕೆ ನಿಜಾಮ್ ಕರ್ನಾಟಕ ಪ್ರದೇಶದ ಕೊಡುಗೆ ಅಪಾರವೆನ್ನುವುದು ಗಮನಾರ್ಹವಾದುದು. ಇಲ್ಲಿಯ ಇನ್ನೂಂದು ಪ್ರಮುಖ ವೈಶಿಷ್ಟ್ಯವೆಂದರೆ ಇದು ದಲಿತ ಚಳವಳಿಗೆ ಮೂಲಸೆಲೆಯಾದ ನಾಡು. ದೇಶದಲ್ಲೆ ದಲಿತಪರವಾದ ಚಿಂತನೆ ಮಹಾರಾಷ್ಟ್ರದಲ್ಲಿ 19ನೇ ಶತಮಾನದ ಆದಿಯಲ್ಲಿ ಜ್ಯೋತಿಬಾ ಫುಲೆ, ಶಾಹು ಮಹಾರಾಜ್ ಸಯ್ಯಾಜಿರಾವ್ ಗಾಯ್ಕಾವಾಡ್ ಇವರಿಂದ ಪ್ರಾರಂಭವಾದರು ಅದು ಪೂರ್ಣ ಸ್ವರೂಪ ಪಡೆದಿದ್ದು ಡಾ. ಬಿ.ಆರ್. ಅಂಬೇಡ್ಕರ್ ಅವರ ನೇತೃತ್ವದಲ್ಲಿ. ಡಾ. ಬಿ.ಆರ್. ಅಂಬೇಡ್ಕರ್ ಅವರ

ಸಾಮಾಜಿಕ ಮತ್ತು ಧಾರ್ಮಿಕ ಪ್ರಭಾವ ಕರ್ನಾಟಕ ರಾಜ್ಯದ ಮೇಲು ಅದರಲ್ಲು ಮುಂಬೈ ಕರ್ನಾಟಕ, ವಿಶೇಷವಾಗಿ ನಿಜಾಮ್ ಕರ್ನಾಟಕ ಭಾಗದ ಜನರ ಮೇಲಾಗಿರುವುದು ಕಂಡುಬರುತ್ತದೆ.

**ನಿಜಾಮ್ ಸಂಸ್ಥಾನದಲ್ಲಿನ ದಲಿತ ಜಾಗೃತಿಗಾಗಿ ನಡೆದ ಸಭೆ ಮತ್ತು ಸಮ್ಮೇಳನಗಳ ಪಾತ್ರ**

ನಿಜಾಮ್ ಹೈದರಾಬಾದ್ ಸಂಸ್ಥಾನದ ದಲಿತರ ಹಾಗೂ ನಿಜಾಮ್ ಕರ್ನಾಟಕ ಭಾಗದ ದಲಿತರ ಏಳಿಗೆಗಾಗಿ 1906–1948ರ ಅವಧಿಯಲ್ಲಿ ದಲಿತರ ಸರ್ವತೋಮುಖ ಅಭಿವೃದ್ದಿಗಾಗಿ ಅನೇಕ ರೀತಿಯಲ್ಲಿ ದಲಿತ ಮತ್ತು ದಲಿತೇತರ ನಾಯಕರುಗಳು ಶ್ರಮಿಸಿದ್ದಾರೆ. ಉದಾ: ಈ ಕೆಳಗೆ ದಲಿತ ಚಳವಳಿ ನಡೆಸಿದ ದಲಿತ ಜಾಗೃತಿ ಕುರಿತಾದ ಸಂಕ್ಷಿಪ್ತ ಚಾರಿತ್ರಿಕ ಪರಿಚಯ ನೀಡಲಾಗಿದೆ. 1906ರಲ್ಲಿ ಜಗನ್ ಮಿತ್ರ ಮಂಡಳಿ ಸ್ಥಾಪನೆ, 1910ರಲ್ಲಿ ದಲಿತ ಮಕ್ಕಳಿಗಾಗಿ ಅನೇಕ ಶಾಲೆಗಳ ಸ್ಥಾಪನೆ, 1911ರಲ್ಲಿ ಆದಿ ಹಿಂದೂ ಸೇವ ಸಂಘವನ್ನು ಸ್ಥಾಪಿಸಿದರು, 1911ರಲ್ಲಿ ಮಾನ್ಯ ಸಂಘ ಸ್ಥಾಪನೆ, 1912ರಲ್ಲಿ ಬಾಗೆರೆಡ್ಡಿ ವರ್ಮ ಅವರು ಬೌದ್ಧ ಧರ್ಮ ಸ್ವಿಕರಿಸಿ ಬೌದ್ಧ ಧರ್ಮದ ತತ್ವಗಳ ಪ್ರಸಾರ, 1919ರಲ್ಲಿ ಅನೇಕ ದಲಿತ ಮತ್ತು ದಲಿತೇತರ ನಾಯಕರ ನೇತೃತ್ವದಲ್ಲಿ ವಿಜಯವಾಡದಲ್ಲಿ ಪ್ರಥಮ ಆದಿ ಹಿಂದೂ ಸಭೆಯನ್ನು ಏರ್ಪಡಿಸಿದರು ಮತ್ತು 1919ರಲ್ಲೆ ಮಹಾತ್ಮ ಗಾಂಧಿಜಿ ಅವರಿಗೆ ಆಕರ್ಷಣೆಯಾಗುವ ರೀತಿಯಲ್ಲಿ ಕಲ್ಕತ್ತಾದಲ್ಲಿನ ಅಖಿಲ ಭಾರತ ಹಿಂದೂ ಸಭೆಯಲ್ಲಿ ಭಾಗೆರೆಡ್ಡಿ ವರ್ಮ ಅವರು ದಲಿತರ ಕುರಿತು ಮಾತನಾಡಿದರು. 1921ರಲ್ಲಿ ಆದಿ ಹಿಂದೂ ಸಮ್ಮೇಳನ ಹೈದರಾಬಾದ್ನಲ್ಲಿ  ನಡೆಸಲಾಯಿತು, 1925ರಲ್ಲಿ ಮತ್ತೊಂದು ಆದಿ ಹಿಂದೂ ಸಮ್ಮೇಳನ ನಡೆಸಲಾಯಿತು, ವಿಶೇಷವಾಗಿ ಈ ಮೇಲಿನ ಎಲ್ಲಾ ಅಂಶಗಳಿಗಿಂತಲು 1925ರಲ್ಲಿ ಆದಿ ಹಿಂದೂ ಆಯಿಂಡ್ ಸಿಲ್ಸ್ ಏಕ್ಸಿಬಿಷನ್ ನಡೆಸಿರುವುದು ಮತ್ತು ತೆಲುಗು ಬಾಗ್ಯೋದಯ, ಇನ್ನಿತರ ಪತ್ರಿಕೆಗಳು ಪ್ರಸ್ತುತ ಅಧ್ಯಯನ ಪ್ರದೇಶದಲ್ಲಿನ ದಲಿತ ಚಳವಳಿಯ ಉಗಮ, ಅದರ ಹೋರಾಟ ಮತ್ತು ಅದರ ಪ್ರಭಾವ ಬೀರಿರುವುದನ್ನು ಇಡೀ ಪ್ರಪಂಚಕ್ಕೆ ಇದರ ಮೂಲಕ ಪರಿಚಯವಾಯಿತು.[8] ಈ ಮೇಲಿನ ಎಲ್ಲಾ ಸಭೆ ಮತ್ತು ಸಮ್ಮೇಳನಗಳು ದಲಿತರಲ್ಲಿ ಜಾಗೃತಿ ಮೂಡಿಸುವ ಪ್ರಮುಖ ಅಂಶಗಳನ್ನು ಹೊಂದಿದ್ದವು. ಇವುಗಳ ಪ್ರಭಾವಗಳಿಗೆ ಒಳಗಾದ ನಿಜಾಮ್ ರಾಜ್ಯದ ಅನೇಕ ದಲಿತ ಮತ್ತು ದಲಿತೇತರ ನಾಯಕರ ಮುಂದಾಳತ್ವದಲ್ಲಿ 1906–1948ರ ಅವಧಿಯಲ್ಲಿ ಗುಲ್ಬರ್ಗ, ಬೀದರ್ ಮತ್ತು ರಾಯಚೂರು ಜಿಲ್ಲೆಗಳಲ್ಲಿ ದಲಿತ ಜಾಗೃತಿಗಾಗಿ ಅಲ್ಲಲ್ಲಿ ಸಭೆ ಸಮ್ಮೇಳನಗಳು ನಡೆದಿರುವುದು ಕಂಡುಬರುತ್ತವೆ. ಅವು ಬಿಡಿ ಬಿಡಿಯಾದ ರೀತಿಯಲ್ಲಿ ಅವುಗಳ ಬಗ್ಗೆ ಮಾಹಿತಿ ದೊರೆಯುತ್ತವೆ. ಅವನ್ನು ನನ್ನ ಪ್ರಸ್ತುತ  ಸಂಶೋಧನಾ ಪ್ರಬಂಧದಲ್ಲಿ ವಿಶ್ಲೇಷಿಸಿ ವಿವರಿಸಲಾಗುವುದು.

**ಉಪಸಂಹಾರ**

ಒಟ್ಟಾರೆಯಾಗಿ ಹೇಳುವುದಾದರೆ ಪ್ರಸ್ತುತ ಅಧ್ಯಯನ ಪ್ರದೇಶದಲ್ಲಿನ  ದಲಿತ ಚಳವಳಿಗೆ ನಿಜಾಮ್ ಸರ್ಕಾರದ  ಸಹಕಾರವು ಕೂಡ ಅತ್ಯಂತ ಮಹತ್ವದಾಗಿದೆ. ಇಂತಹ ಹಲವು ಅಂಶಗಳು ಅಲ್ಲದೆ ಇನ್ನೂ ಪ್ರಮುಖ ಅಂಶಗಳು ಆಧುನಿಕ ಕಾಲದಲ್ಲಿ ನಿಜಾಮ್ ಕರ್ನಾಟಕ ರಾಜ್ಯದಲ್ಲಿ ಕೆರಳಿದ ದಲಿತ ಚಳವಳಿಗೆ ಒಂದು ವಿಶೇಷ ಗತಿ, ದಿಕ್ಕುದೆಸೆಗಳಿವೆ ಅವುಗಳೆಂದರೆ ದಲಿತರ ವಿಮೋಚನೆ, ದಲಿತರ ಅಧಿಕಾರ, ವರ್ಗವ್ಯವಸ್ಥೆಯ ಅಂತ್ಯ, ಜಾತಿ ವಿರೋಧ ಕ್ರಮಗಳೊಂದಿಗೆ ಸೇರಿವೆ, 42ವರ್ಷಗಳ ವರೆಗೆ ಮುಂದುವರೆದ ಮತ್ತು ನಂತರದ ಅವಧಿವರೆಗೂ ಮುಂದುವರಿಯತ್ತಿರುವ ದಲಿತ ಚಳವಳಿಯ ಪ್ರಾಧಾನ್ಯತೆ ಹಾಗೂ ಅದು

ಸಾಧಿಸಿರುವ ಗೆಲುವು, ಅವುಗಳ ಮುಂದಿರುವ ಸವಾಲಗಳನ್ನು ವಿಶ್ಲೇಷಿಸುವುದು ಬಹಳ ಮುಖ್ಯ ಮತ್ತು ಕಾಲದ ಗತಿಯಲ್ಲಿ ಹಲವಾರು ದಲಿತ ಚಳವಳಿಗೆ ಸೇರಿದ ಅಂಶಗಳು ಹುದಿಗಿರುವುದವುಗಳು ನಿಜಾಮ್ ಕರ್ನಾಟಕ ಪ್ರದೇಶದಲ್ಲಿ ಇರುವುದರಿಂದ ಅವುಗಳ ಬಗ್ಗೆ ಇನ್ನು ಹೆಚ್ಚಿನ ಸಂಶೋಧನೆಗಳು ನಡೆಯುವುದು ಅತಿ ಅವಶ್ಯಕವಾಗಿದೆ ಎಂದರೆ ತಪ್ಪಾಗಲಾರದು.

**ಕೊನೆಟಿಪ್ಪಣಿಗಳು**


1. ಸೂರ್ಯನಾಥ್ ಯು ಕಾಮತ್. (1991). ಹಿಸ್ಟೋರಿಯೋಗ್ರಫಿ ಕರ್ನಾಟಕ. ಬೆಂಗಳೂರು. ಪು.1.
2. ಗಾಂಧೀಜಿ. (2017). ಹೈದರಾಬಾದ್ ಕರ್ನಾಟಕದ ಐತಿಹಾಸಿಕ ಕಥನ. ಎಸ್.ಎಸ್ ಪ್ರಕಾಶನ ಕಲಬುರಗಿ. ಪು. 9.
3. ಜಾತಿ ವಿನಾಶ ಸಮಿತಿ (2016, ಡಿಸೆಂಬರ್). ಜಾತಿ ವ್ಯವಸ್ಥೆಯ ಇತಿಹಾಸ ಹಾಗೂ ಜಾತಿ ವಿನಾಶದ ರೂಪುರೇಷೆ. ಕರ್ನಾಟಕ ಜನಶಕ್ತಿ, ಪು.19–27.
4. ಶಾರದ. (2019). ದಲಿತ ಸಾಹಿತ್ಯ ಮತ್ತು ಚಳುವಳಿಯ ಅಂತರ್ ಸಂಬಂಧ. ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು. ಪುಟ. 14–33.
5. ನಾಗಮೋಹನ್ ದಾಸ್ ಎಚ್.ಎನ್. (2018). ಸಂವಧಾನ ಓದು. ಸಹಯಾನ,' ಉತ್ತರ ಕನ್ನಡ. ಪು. 30
6. ಬ್ರಜ್ ರಂಜನ್ ಮಣಿ (ಮೂ.). (2019). ಚರಿತ್ರೆಯ ಅಬ್ರಾಹ್ಮಣೀಕರಣ (ಭಾರತ ಸಮಾಜದಲ್ಲಿ ಯಜಮಾನಿಕೆ ಮತ್ತು ಪ್ರತಿರೋಧ) (ರೀಟಾರೀನಿ, ಎ. ಅನು.) ಟಿಇಡಿಎಸ್. ಪಬ್ಲಿಕೇಷನ್ಸ್, ಬೆಂಗಳೂರು. ಪು. 311–316.
7. ಚಿನ್ನಸ್ವಾಮಿ ಸೋಸಲೆ. (2016). ಕರ್ನಾಟಕದ ಸಮಗ್ರ ದಲಿತ ಚರಿತ್ರೆ. ನವಕರ್ನಾಟಕ ಪಬ್ಲಿಕೇಷನ್ಸ್, ಬೆಂಗಳೂರು. ಪುಟ. 873–877.
8. Satyanarayana A., Ganapa Venkat Rajam, Ema Venkatesvara. (2004). Retrieving the past: History and Culture of Telangana. Osmania University, PP-148-152.